**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ. 529/2025** **ಫ್ರಾ.ಸಾ –7**

**ಚಾ.ಸಾ –8**

**ದಿನಾಂಕಃ 16.06.2026.ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಬಸವರಾಜು ಡಿ |
| ತಂದೆಯ ಹೆಸರು | : | ದೊಡ್ಡೇಗೌಡ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ |
| ವಾಸ ಸ್ಥಳ | : | ಶ್ರೀಮಂಗಲ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು ಫೆಬ್ರವರಿ 2022 ಯಿಂದ ಇಲ್ಲಿಯವರೆಗೆ ಶ್ರೀಮಂಗಲ ಪೊ. ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 22.01.2025 ರಂದು ವೆಸ್ಟ್ ನೆಮ್ಮಲೆ ಗ್ರಾಮದಲ್ಲಿ ಈ ಪ್ರಕರಣಕ್ಕೆ ಸಂಬಂದಿಸಿದಂತೆ ಸ್ವತ್ತು ಅಮಾನತು ಮಹಜರ್ ಮತ್ತು ಸ್ಥಳ ಮಹಜರ್ ಮಾಡುವಾಗ ನನ್ನ OPPO Reno 7, 5G ಮೊಬೈಲ್ ನಿಂದ ಫೋಟೋ ಮತ್ತು ವಿಡಿಯೋ ಮಾಡಿರುತ್ತೇನೆ. ನಿ ಪಿ 2 ಮಹಜರ್ಗೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಂತರ ಠಾಣೆಗೆ ವಾಪಸ್ ಬಂದು, ಇಲಾಖಾ ಠಾಣಾ computer and Epson printer ನಲ್ಲಿ ಪ್ರಿಂಟ್ ತೆಗೆಸಿ ಚಾಸಾ 9 ರವರಿಗೆ ಆ ಫೋಟೋ ಮತ್ತು ವಿಡಿಯೋವನ್ನು ಸಿ ಡಿ ಗೆ ಹಾಕಿ ಕೊಟ್ಟಿರುತ್ತೇನೆ.

ಸಾಕ್ಷಿಗೆ ಸಿ ಡಿಯಲ್ಲಿರುವ ಆ ವಿಡಿಯೋವನ್ನು Laptop ನಲ್ಲಿ ಹಾಕಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 8 ಎಂದು ಗುರುತಿಸಲಾಯಿತು. ಈ ಬಗ್ಗೆ ಕಲಂ 65 ಬಿ ಭಾ ಸಾ ಅಧಿನಿಯಮದಡಿಯಲ್ಲಿ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ಆ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು. ಸಾಕ್ಷಿಯು ನಿ ಪಿ 3 ಮತ್ತು 4 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಸಿ. ಪಿ. ಪಿ. ವಕೀಲರಿಂದಃ**

ನಿ ಪಿ 3 ಫೋಟೋದಲ್ಲಿ ನನ್ನ ಮೊಬೈಲ್ Reno 7, 5G ಎಂದು ಇದೆ. ನಿ ಪಿ 9 ಪ್ರಮಾಣ ಪತ್ರದಲ್ಲಿ ನನ್ನ ಫೋನ್‌ನ ಹೆಸರು ಕೇವಲ OPPO ಎಂದು ಮಾತ್ರ ಇದೆ ಎಂದರೆ ಸರಿ. ಇಲಾಖಾ ಕ್ಯಾಮೆರಾ ರಿಪೇರಿ ಆಗಿದ್ದು, ನನ್ನ ಫೋನ್ ಅನ್ನು ಉಪಯೋಗಿಸಿದೆ. ನಿ ಪಿ 9 ಪ್ರಮಾಣ ಪತ್ರದಲ್ಲಿ printer ನ ವಿವರಗಳು ಇಲ್ಲ ಎಂದರೆ ಸರಿ. ನಾನು ಫೋಟೋ ಮತ್ತು ವಿಡಿಯೋವನ್ನು ಕೃತ್ಯ ಸ್ಥಳದಲ್ಲಿ ತೆಗೆದಿಲ್ಲ, ಫೋಟೋ, ವಿಡಿಯೋವನ್ನು ಹಾಗೂ ಸಿ ಡಿ ಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇರುವುದಿಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ